ಶ್ರೀ ಎಚ್. ಎನ್. ನಂಜೇಗೌಡ.— ಯಾತ ನೀರಾವರಿ ಭಾರಿ ದುಬಾರಿ ಆಗುವುದಲ್ಲದೆ ತಾಂತ್ರಿಕವಾಗಿ ಅದು ಸಾಧ್ಯವಿಲ್ಲ ಎನ್ನುವ ಅಭಿಪ್ರಾಯ ಬಂದಿರುವುದರಿಂದ ಹಾಗೆ ಉತ್ತರ ಕೊಟ್ಟಿದೆ. ಅದನ್ನು ಪರಿಶೀಲನೆ ಮಾಡಿದ ಮೇಲೆಯೇ ಉತ್ತರ ಕೊಟ್ಟಿರುವುದು. ತಾಂತ್ರಿಕವಾಗಿ ಏನು ಮಾಡುವುದಕ್ಕೂ ಸಾಧ್ಯವಿಲ್ಲ ಎನ್ನುವ ತಕ್ಕದ್ದು ವರದಿಯಾಗಿದೆ. ಅದನ್ನು ಮಾತ್ರ ಹೇಳಿದ್ದೇನೆ.

REHABLITATION OF WET-SWEEPERS IN SHIKARIPUR TOWN

501. Sri K. YENKATAPPA (Shikaripur).—

Will the Minister for Municipal Administration be pleased to state :—

(a) whether it is under the contemplation of the Government to demolish the present huts where wet-sweepers of Shikaripur Town are residing and to send them some where else by constructing the houses;

(b) if so, whether it is a fact that the survey No. 6 where they are residing at present was granted to some one else at upset price during the Administator's regime;

(c) the length and breadth of each site and their cost;

(d) whether it has come to the notice of the Government that this site is a prominent site in Shikaripur Town; if so, the reason for granting it at upset price;

(e) whether the revenue of the Municipality is reduced on account of this;

(f) whether the sites granted at survey Nos. 6 and 7 would be cancelled as irregularities took place during Administrator's regime;

(g) the reason for granting the sites at survey No. 6 to some one else by overlooking the wet-sweepers even through they were residing there since many years ?

Sri B. BASAVALINGAPPA (Minister for Municipal Administration).—

(a) Yes.

(b) Yes.

(c) The length, breadth and cost of each site is as follows :—

(1) Site Nos. 5, 6, 7, 8, 9 and 10=20′×110′

(2) Site Nos. 1, 2, 3, and 4=20′×80′

Cost :— Rs. 2 per square yard.

(d) Yes. The reasons for granting the sites at upset prices during 1966–67 cannot be said at this juncture and the records do not show the reasons therefor.

(e) Since they were disposed off in that manner the question of Revenue does not arise.

(f) This will be considered.

(g) As the land acquired at survey numbers 11–1 and 19–2 at Kanur village has been granted to them, this land has been granted to some one else.

ಶ್ರೀ ಕೆ. ಯಂಕಟಪ್ಪ.— ಸ್ವಾಮಿ 'ಇ'ನಲ್ಲಿ ಒಂದೊಂದು ಸೈಟಿನ ಉದ್ದ ಅಗಲ ಎಷ್ಟು ಮತ್ತು ಬೆಲೆ ಎಷ್ಟು ಎಂದು ಕೇಳಿದ್ದಕ್ಕೆ ಹೇಳಿದ್ದೀರಿ. ಬೆಲೆ ಹೇಳಿದ ಮೇಲೆ ಪುರಸಭೆ ಆದಾಯ ಕಡಿಮೆಯಾಗಲಿಲ್ಲ, ಇಲ್ಲವೇ ಜಾಸ್ತಿ ಎನ್ನುವ ಬಗ್ಗೆ ಪೂರ್ಣವಾಗಿ ಏನೂ ಹೇಳಲಿಲ್ಲ. ಆದುದರಿಂದ ಆ ಸೈಟುಗಳನ್ನು ಅಡ್ಮಿನಿಸ್ಟ್ರೇಟರ ಕಾಲದಲ್ಲಿ ಏನು ಕೊಟ್ಟಿದ್ದೀರಿ, ಅವುಗಳ ಬಗ್ಗೆ ತಾವು ಅತಿ ಶೀಘ್ರವಾಗಿ ಪರಿಶೀಲಿಸಿ ಅದನ್ನು ರದ್ದುಪಡಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ? ಅದು ಮುಖ್ಯವಾದ ಸ್ಥಳವಾದುದರಿಂದ ಆ ಸೈಟುಗಳು ಕೊಟ್ಟಿರುವುದನ್ನು ರದ್ದುಪಡಿಸದೇ ಇದ್ದರೆ ಪುರಸಭೆಗೆ ಆದಾಯ ಕಡಿಮೆ ಬರುತ್ತದೆ. ಆದರ ಬಗ್ಗೆ ತಮ್ಮ ಅಭಿಪ್ರಾಯವೇನು ?

†ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಹೇಳಿರತಕ್ಕ ಏನು ಪ್ರದೇಶವಿದೆ, ಅದು ನಿಜವಾಗಿ ಬೆಲೆ ಬಾಳತಕ್ಕ ಪ್ರದೇಶ. ಷೆಡ್ಯೂಲ್ ಕಾಸ್ಟ, ಷೆಡೂಲ್ ಟ್ರೈಬ್ ಜನಗಳಿಗೆ ಸೈಟ್ಸ್‌ಮಾಡಿ ಕೊಡಬೇಕು ಎಂದು ಮೊದಲು ತೀರ್ಮಾನವಾಗಿತ್ತು. ಮತ್ತು ಅಡ್ಮಿನಿಸ್ಟ್ರೇಟರ ಕಾಲದಲ್ಲಿ ಬೇರೆಯವರಿಗೆ ವಿಲೇವಾರಿ ಮಾಡಿದ್ದಾರೆ ಅದು ಸರಿಯಲ್ಲ ಎಂದು ಡೆಪುಟಿ ಕಮೀಷನರ್ ರೆಸಲ್ಯೂಷನ್ ಸಸ್ಪೆಂಡ ಮಾಡಿದ್ದಾರೆ. ಆದುದರಿಂದ ಯಾರಿಗೋಸ್ಕರ ಅದು ಅಕ್ವೈರ ಆಗಿತ್ತೋ ಅವರಿಗೆ ಸಿಗಬೇಕು ಎಂದು ಸರಕಾರದ ನಿರ್ದೇಶ ಇರುತ್ತದೆ ಎಂದು ಹೇಳುತ್ತೇನೆ.

ಶ್ರೀ ಕೆ. ಯಂಕಟಪ್ಪ.— ಹಿಂದಿನ ನಿರ್ದೇಶನದ ಪ್ರಕಾರ ಸರ್ವೆ ನಂ. ೧೧ ಮತ್ತು ೧೯ರಲ್ಲಿ ಈಗಿರತಕ್ಕ ಸ್ವೀಪರ್ಸ್, ಹರಿಜನರಿಗೆ ಕೊಟ್ಟಿದ್ದರು. ೬ನೇ ಸರ್ವೆ ನಂಬರ ಜಾಗದಲ್ಲಿ ಇರುವವರನ್ನು ಶಿಫ್ಟ್ ಮಾಡಿ, ಆ ಪ್ರದೇಶದಲ್ಲಿ ಕೊಟ್ಟಿದ್ದರು. ಆದರೆ ಅದೇ ೬ನೇ ಸರ್ವೆ ನಂಬರಿನಲ್ಲಿ ಅಡ್ಮಿನಿಸ್ಟ್ರೇಟರ್ ಕಾಲದಲ್ಲಿ ಸೈಟುಗಳನ್ನು ಮಾಡಿ ಬೇರೆಯವರಿಗೆ ಕೊಟ್ಟಿದ್ದಾರೆ. ಅವರನ್ನು ಶಿಫ್ಟ್ ಮಾಡಿದ್ದಾರೆ. ಅಡ್ಮಿನಿಸ್ಟ್ರೇಟರ್ ಕಾಲದಲ್ಲಿ ೬ ಮತ್ತು ೬ನೇ ಸರ್ವೆ ನಂಬರ್‌ನಲ್ಲಿ ಬೇರೆಯವರಿಗೆ ಕೊಟ್ಟಿರತಕ್ಕ ದ್ದನ್ನು ರದ್ದುಪಡಿಸಲಿಕ್ಕೆ ತಾವು ಆದೇಶ ಕೊಟ್ಟಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ.— ಡಿವಿಜನಲ್ ಕಮೀಷನರ್ ಕೂಡ ಇದೇ ರೀತಿ ಶಿಫಾರಸು ಮಾಡಿದ್ದಾರೆ. ಯಾರಿಗೋಸ್ಕರ, ಯಾವ ಉದ್ದೇಶಕ್ಕೋಸ್ಕರ ಅಕ್ವೈರ್ ಮಾಡಿತ್ತೋ ಆ ಉದ್ದೇಶಕ್ಕೋಸ್ಕರ ನಾವು ಕಾನೂನು ಪ್ರಕಾರ ಕೊಡಲೇಬೇಕಾಗುತ್ತದೆ. ಆದುದರಿಂದ ತದ್ವಿರುದ್ಧ ಅಡ್ಮಿನಿಸ್ಟ್ರೇರ್ ನಡೆದಿದ್ದರೆ, ಅದನ್ನು ಕ್ಯಾನ್ಸಲ್ ಮಾಡಲಿಕ್ಕೆ ಇವತ್ತೇ ಆದೇಶ ಕೊಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ಸ್ವಾಮಿ, ಅವರು ನಿಮ್ಮ ಅಡ್ಮಿನಿಸ್ಟ್ರೇಟರ್.

ಶ್ರೀ ಬಿ. ಬಸವಲಿಂಗಪ್ಪ.— ಹೊಸ ಅಡ್ಮಿನಿಸ್ಟ್ರೇಟರ್ ಅಲ್ಲ, ಹಳೇ ಅಡ್ಮಿನಿಸ್ಟ್ರೇಟರ್.

ಶ್ರೀ ಎಚ್. ಎಸ್. ಸಿದ್ದಪ್ಪ.— ಮಂತ್ರಿಗಳಲ್ಲಿ ಹೊಸಬರು, ಹಳಬರು ಎಂದು ಇಲ್ಲ. ಮಂತ್ರಿ ಯಾರಾದರೂ ಮಂತ್ರಿ. ಚುನಾಯಿತ ಪುರಸಭೆ ಇಲ್ಲದೇ ಇರುವಾಗ ಆ ಅಡ್ಮಿನಿಸ್ಟ್ರೇಟರ್ ಇಂತಹ ಅವಿವೇಕದ ಅಧಿಕಾರ ಮಾಡುವುದಕ್ಕೆ ಸಾಧ್ಯವಿದೆಯೇ? ಅದನ್ನು ಕಂಟ್ರೋಲ್ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.— ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಅಡ್ಮಿನಿಸ್ಟ್ರೇಟರ್ ಕಾನೂನು ಪ್ರಕಾರ ನಡೆಯದೇ ಹೋದರೆ, ಅಂತಹರಿಗೆ ಸೂಕ್ತ ಶಾಸ್ತಿ ಮಾಡುವುದಕ್ಕೆ ಯಾವತ್ತೂ ತಯಾರಿದ್ದೇವೆ. ೧೯೬೬ನೇ ಇಸವಿಯಲ್ಲಿ ಯಾವ ಸರಕಾರ ಇತ್ತು ನೋಡಿರಿ, ಆಗ ಇದ್ದ ಅಡ್ಮಿನಿಸ್ಟ್ರೇಟರ್ ಕಾಲದಲ್ಲಿ ಈ ಅವಿವೇಕ ಆಗಿದ್ದು, ಅದನ್ನು ಸರಿಪಡಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಸ್ವಾಮಿ, ಇದರೊಳಗೆ ಬೇರೆಯವರಿಗೆ ಕೊಡಲಾಗಿದೆ ಎಂದು ಹೇಳಲಾಗಿದೆ. ಬೇರೆಯವರು ಎಂದರೆ ಯಾರು ? ಅಂಥ ಪವರ್‌ಫುಲ್ ಪರ್ಸನಾಲಿಟೀಸ್ ಯಾರು? ಮುನಸಿಪಲ್ ಕೌನ್ಸಿಲರೇ ಅಥವಾ ಕಾಂಗ್ರೆಸ್ ಮುಖಂಡರೇ ಅಥವಾ ಇನ್ನು ಯಾರಾದರೂ ವ್ಯಾಪಾರಸ್ಥನೇ, ಸ್ಪಷ್ಟವಾಗಿ ಹೇಳಿ?

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರು ಹೇಳಿರತಕ್ಕ ಸೂಚನೆ ಸ್ವಲ್ಪ ನಿಜ ಎಂದು ಕಾಣುತ್ತದೆ. ಯಾರು ಯಾರು ಅಧಿಕಾರದಲ್ಲಿದ್ದರು, ಅವರ ಸಂಬಂಧಗಳಿಗೆ ಕೊಟ್ಟಿದ್ದಾರೆಂದು ವರದಿ ಇದೆ.

ಶ್ರೀ ಎಂ. ಎಸ್. ಕೃಷ್ಣನ್.— ಹೆಸರು ಹೇಳಿ ?

ಶ್ರೀ ಬಿ. ಬಸವಲಿಂಗಪ್ಪ.— ಹೆಸರು ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದವರೆ, ಕಾಂಗ್ರೆಸ ಪಕ್ಷಕ್ಕೆ ಸೇರಿದವರೆ ಹೇಳಿ ?

ಶ್ರೀ ಬಿ.ಬಸವಲಿಂಗಪ್ಪ.—ಆಗ ಕಮ್ಯುನಿಷ್ಟ ಪಕ್ಷ ಇರಲಿಲ್ಲ, ನ್ಯೂನತೆಯಾಗಿದೆ ಎಂದು ವರದಿ ಬಂದಿದೆ. ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇನೆ.

ಶ್ರೀ ಕೆ. ಯಂಕಟಪ್ಪ.—ಸ್ವಾಮಿ, ಈಗ ಸರ್ವೆ ನಂಬರ್ ೬೮ ವಿಷಯದಲ್ಲಿ ಹೇಳಿದ್ದಾ ಯಿತು. ಈಗ ಸರ್ವೆ ನಂಬರ ೭೮ಲ್ಲಿ ತೆಗೆದುಕೊಂಡರೆ ಅದೂ ಕೂಡ ಮುಖ್ಯ ವಾಗಿರತಕ್ಕಂಥ ಜಾಗ. ಅದೂ ಕೂಡ ಅಡ್ಮಿನಿಸ್ಟ್ರೇಟರ್ ಕಾಲದಲ್ಲಿ ಅನ್ಯಾಯ ನಡೆ ದಿದೆ. ಆದುದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀವೆ ಎಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಆ ಸರ್ವೆ ನಂಬರ ಬಗ್ಗೆ ಆ ರೀತಿ ಏನೂ ರಿಪೋರ್ಟ್‌ನಲ್ಲಿ ಇಲ್ಲ. ಆದರೆ ಮಾನ್ಯ ಸದಸ್ಯರು ಅದರಲ್ಲೂ ಆವಿವೇಕ ನಡೆದಿದೆ ಎಂದು ಹೇಳುತ್ತಾರೆ. ಆ ರೀತಿ ಏನಾದರೂ ಇದ್ದರೆ ಅದನ್ನು ಸರಿಪಡಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದೆಕ್ಕೆ ಸಿದ್ಧವಾಗಿದ್ದೇನೆ. ಈ ಬಗ್ಗೆ ಈವೊತ್ತೇ ನಿರ್ದೇಶನ ಕಳುಹಿಸುತ್ತೇನೆ.

CONSTRUCTION OF VENTED DAM ACROSS KANCHAR RIVER IN BALUGODU VILLAGE

917. Sri K. SUBRAMANYA GOWDA (Belthangady).— Will the Minister for Public Works and Electricity be pleased to state:—

(a) in which year the construction of a Vented Dam across the Kanchar River in Balugodu Village of Sullia Taluk P. W. D. Mangalore Division, South Kanara was sanctioned and what is its estimated cost;

(b) whether the work of this project has been completed ;

(c) if not, the reasons for leaving it in incomplete stage ;

(d) whether Government propose to complete this project and make it useful to the ryots ;